1) ಮಧುಮೇಹ ರೋಗಿಗಳಲ್ಲಿ ಸಕ್ಕರೆ ಮಟ್ಟವನ್ನು ತಿಳಿಸುವ ಪರೀಕ್ಷೆ ಯಾವುದು?
ಎ) ಬೆನೆಡಿಕ್ಟ್ ಪರೀಕ್ಷೆ ಬಿ) ಬಾರ್‌ಫೋರ್ಡ್ ಪರೀಕ್ಷೆ
ಸಿ) ಡೆನಿಗೆ ಪರೀಕ್ಷೆ ಡಿ) ಎಲಿಸ ಪರೀಕ್ಷೆ

2) ಮಾನವನ ಮೆದುಳಿನಲ್ಲಿ ದೇಹದ ಸಮತೋಲನವನ್ನು ಕಾಪಾಡುವ ಭಾಗ ಯಾವುದು?
ಎ) ಸೆರೆಬ್ರಮ್ ಬಿ) ಹೈಪೋಥಲಾಮಸ್
ಸಿ) ಸೆರೆಬೆಲ್ಲಮ್ ಡಿ) ಪಾನ್ಸ್

3) ಒಂಟೆಯ ದೇಹದ ಉಷ್ಣತೆ $45^0$ ಸೆ. ಇದ್ದು, ಇದು ಫ್ಯಾರನ್‌ಹೀಟ್ ಮಾನದಲ್ಲಿ ಎಷ್ಟಾಗುತ್ತದೆ?
ಎ) $113^0$ F ಬಿ) $87^0$ F
ಸಿ) $13^0$ F ಡಿ) $212^0$ F

4) ಕೆಳಗಿನವುಗಳಲ್ಲಿ ಯಾವ ಜೀವ ಭೂ ರಾಸಾಯನಿಕ ಚಕ್ರವು ಬ್ಯಾಕ್ಟೀರಿಯಾಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ?
ಎ) ಕಾರ್ಬನ್ ಚಕ್ರ ಬಿ) ನೈಟ್ರೋಜನ್ ಚಕ್ರ
ಸಿ) ಸಲ್ಫರ್ ಚಕ್ರ ಡಿ) ಮೇಲಿನ ಎಲ್ಲವೂ

5) ಅಂಗಗಳ ಉಪಯೋಗ ಮತ್ತು ಅನುಪಯೋಗ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ ವಿಜ್ಞಾನಿ ಯಾರು?
ಎ) ಚಾರ್ಲ್ಸ್ ಡಾರ್ವಿನ್ ಬಿ) ಮೊರ್ಗನ್
ಸಿ) ಲೆಮಾರ್ಕ್ ಡಿ) ಯಾರು ಅಲ್ಲ

6) ತಲಕಳಲೆ ದ್ವೀಪಗಳು ಯಾವ ನದಿ ಕಣಿವೆ ವ್ಯಾಪ್ತಿಯಲ್ಲಿವೆ?
ಎ) ಅಘನಾಶಿನಿ ಬಿ) ಕೃಷ್ಣಾ
ಸಿ) ಶರಾವತಿ ಡಿ) ಭೀಮಾ

7) ಪೋಲಿಸ್ ಸ್ಮರಣಾರ್ಥ ದಿನ?
ಎ) ಜೂನ್ 21 ಬಿ) ನವೆಂಬರ್ 21
ಸಿ) ಫೆಬ್ರವರಿ 21 ಡಿ) ಅಕ್ಟೋಬರ್ 21

8) ಕೆಳಗಿನ ಯಾವುದು ಜಿಲ್ಲಾ ಪೋಲಿಸ್ ವ್ಯವಸ್ಥೆಯ ಭಾಗವಲ್ಲ?
ಎ) ಶ್ವಾನದಳ ಬಿ) ಡಿಎಆರ್
ಸಿ) ಕೆಎಸ್‌ಆರ್‌ಪಿ ಡಿ) ಬ್ಯಾಂಡ್‌ಪಾರ್ಟಿ

9) ಯಾವ ಪೋಲಿಸ್ ಸಂಘಟನೆಯ ಕಾರ್ಯ ಪ್ರದರ್ಶನದ ಸಂಕೇತವಾಗಿ ಪೋಲಿಸ್ ಸ್ಮರಣಾ ದಿನದ ಆಚರಣೆಯನ್ನು ಆರಂಭಿಸಲಾಯಿತು?
ಎ) ಸಿಆರ್‌ಪಿಎಫ್ ಬಿ) ಐಟಿಬಿಪಿ
ಸಿ) ಕೆಎಸ್‌ಆರ್‌ಪಿ ಡಿ) ಕೆಎಸ್‌ಐಎಸ್‌ಎಫ್

10) ಭಾರತದಲ್ಲಿ ಪೋಲಿಸ್ ಇಲಾಖೆಯ ಅತ್ಯುನ್ನತ ಹುದ್ದೆ?
ಎ) ಇಂಟೆಲಿಜೆನ್ಸ್ ಬ್ಯುರೋದ ನಿರ್ದೇಶಕರು
ಬಿ) ಸಿಬಿಐ ನಿರ್ದೇಶಕರು
ಸಿ) ಡಿಜಿಪಿ
ಡಿ) ಯಾವುದು ಅಲ್ಲ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
Square, 1ನೇ ಮಹಡಿ ಸ್ಪಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಭಾವಿ, ಧಾರವಾಡ-580001
ಮೊ: 7022471511, 7022473611

11) ಸಿಬಿಐ ಅಧಿಕಾರಿಗಳಿಗೆ ತರಬೇತಿ ನೀಡುವ ಸಂಸ್ಥೆ ಇರುವುದು?
ಎ) ದೆಹಲಿ ಬಿ) ಡೆಹರಾಡೂನ್
ಸಿ) ಘಾಜಿಯಾಬಾದ್ ಡಿ) ಹೈದ್ರಾಬಾದ್

12) ಪೋಲಿಸ್ ಇಲಾಖೆಯಲ್ಲಿ ನಾಯಿಗಳ ಬಳಕೆ ಆರಂಭವಾದದ್ದು?
ಎ) 1968 ಬಿ) 1975
ಸಿ) 1989 ಡಿ) 1993

13) ಕೆಳಗಿನ ಹೇಳಿಕೆ ಗಮನಿಸಿ.
1. ನಿದ್ರಿತ ಅಥವಾ ಮೃತ ಜ್ವಾಲಾಮುಖಿ – ಬ್ಯಾರನ್
2. ಸುಪ್ತ ಜ್ವಾಲಾಮುಖಿ – ನಾರ್ಕೊಂಡಂ
3. ಮೇಲಿನ ಎರಡೂ ದ್ವೀಪಗಳು ಲಕ್ಷದ್ವೀಪಗಳಲ್ಲಿ ಕಂಡುಬರುತ್ತವೆ.

ಮೇಲಿನವುಗಳಲ್ಲಿ ತಪ್ಪಾದ ಹೇಳಿಕೆಗಳನ್ನು ಗುರ್ತಿಸಿ.
ಎ) 3 ಮಾತ್ರ ಬಿ) 1 & 2
ಸಿ) 2 & 3 ಡಿ) ಮೇಲಿನ ಎಲ್ಲವೂ

14) ಒಂದೇ ಪತ್ರವನ್ನು ಹಲವು ವ್ಯಕ್ತಿಗಳಿಗೆ ಕಳಿಸಲು ಬಳಸಬಹುದಾದ ಆಯ್ಕೆ.........?
ಎ) Macros ಬಿ) Template
ಸಿ) Mail merge ಡಿ) ಯಾವುದು ಅಲ್ಲ

15) Desktop publishing software ಗಳು.......... ಗಳ Advanced Concept?
ಎ) Spread Sheet ಬಿ) $113^0$ FGraphical
ಸಿ) Database ಡಿ) $113^0$ FWord Processing

16) ಹೊಸ ಅಖಿಲ ಭಾರತ ಸೇವೆಯನ್ನು ಸ್ಥಾಪಿಸುವ ಸಂಬಂಧದ ವಿಧೇಯಕ ಮೊದಲು ಯಾವ ಸದನದಲ್ಲಿ ಮಂಡನೆಯಾಗಬೇಕು?
ಎ) ಲೋಕಸಭೆ ಬಿ) ರಾಜ್ಯಸಭೆ
ಸಿ) ರಾಜ್ಯ ವಿಧಾನಸಭೆ ಡಿ) ಜಂಟಿ ಅಧಿವೇಶನ

17) ಭಾರತದಲ್ಲಿ ನ್ಯಾಯಾಂಗ ಪುನರ್‌ವಿಮರ್ಶೆ (Judicial Review) ನಿಯಂತ್ರಿತವಾಗಿರಲು ಕಾರಣವೇನು?
ಎ) ಶಾಸಕಾಂಗದ ಪ್ರಾಧಾನ್ಯತೆ
ಬಿ) ಕಾರ್ಯಾಂಗದ ಪ್ರಾಧಾನ್ಯತೆ
ಸಿ) ಸಂವಿಧಾನದ ಪ್ರಾಧಾನ್ಯತೆ
ಡಿ) ಯಾವುದು ಅಲ್ಲ

18) ಕರ್ನಾಟಕ ರಾಜ್ಯ ವಿಧಾನ ಪರಿಷತ್‌ನಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು?
ಎ) 40 ಬಿ) 60
ಸಿ) 28 ಡಿ) 75



Scanned with CamScanner

www.shikarat.com



19) 1978-80 ರ ಅವಧಿಯಲ್ಲಿ ಜಾರಿಯಲ್ಲಿದ್ದ ಉರುಳುವ ಯೋಜನೆಗೆ ಮೂಲಾಧಾರವಾಗಿದ್ದ ಚಿಂತನೆ ಯಾವುದು?
ಎ) ವಿಶ್ವೇಶ್ವರಯ್ಯ ಬಿ) ಗಾಂಧೀಜಿ
ಸಿ) ನೆಹರೂ ಡಿ) ಕಮ್ಯುನಿಸಂ

20) (SIDBI) Small Industries Development Bank of India ದ ಮುಖ್ಯ ಕಛೇರಿ ಎಲ್ಲಿದೆ?
ಎ) ಮುಂಬೈ ಬಿ) ಲಕ್ನೋ
ಸಿ) ಕೋಲ್ಕತ್ತಾ ಡಿ) ಚೆನ್ನೈ

21) ಕೆಳಗಿನ ಯಾವ ವಲಯದ ಚಟುವಟಿಕೆಯನ್ನು ತೃತೀಯ ವಲಯದ ಚಟುವಟಿಕೆ ಎಂದು ಕರೆಯಬಹುದು?
ಎ) ಗೋಧಿಯ ಉತ್ಪಾದನೆ
ಬಿ) ಮೊಟ್ಟೆಗಳ ಉತ್ಪಾದನೆ
ಸಿ) ಅಣೆಕಟ್ಟು ನಿರ್ಮಾಣ
ಡಿ) ಆರೋಗ್ಯ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
Square, 1ನೇ ಮಹಡಿ ಸ್ವಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಬಾವಿ, ಧಾರವಾಡ-580001
ಮೊ: 7022471511, 7022473611

22) ಕಪ್ಪು ಕ್ರಾಂತಿ ಸಂಬಂಧಿಸಿರುವುದು?
ಎ) ಮೀನು ಉತ್ಪಾದನೆ ಬಿ) ಕಲ್ಲಿದ್ದಲು ಉತ್ಪಾದನೆ
ಸಿ) ಕಚ್ಚಾತೈಲ ಉತ್ಪಾದನೆ ಡಿ) ಸಾಸಿವೆ ಉತ್ಪಾದನೆ

23) ಆದಾಯದ ಅಸಮಾನತೆಯನ್ನು ಕಡಿಮೆ ಮಾಡಲು ಉಪಯುಕ್ತವಾದ ನೀತಿ ಯಾವುದು?
ಎ) ವಿತ್ತೀಯ ನೀತಿ ಬಿ) ಸಾರ್ವಜನಿಕ ವಿತರಣಾ ನೀತಿ
ಸಿ) ಬಜೆಟ್ ನೀತಿ ಡಿ) ವಿದೇಶಾಂಗ ನೀತಿ

24) ಕೆಳಗಿನ ಯಾವ ಸಂದರ್ಭಗಳಲ್ಲಿ "ವ್ಯಾಪಾರ ಕೊರತೆ" (Trade Deficit) ಸಂಭವಿಸುತ್ತದೆ?
ಎ) ಸರಕುಗಳ ರಫ್ತು, ಆಮದಿಗಿಂತ ಕಡಿಮೆಯಾದಾಗ
ಬಿ) ಸರಕುಗಳ ರಫ್ತು, ಆಮದಿಗಿಂತ ಹೆಚ್ಚಾದಾಗ
ಸಿ) ಸೇವೆಗಳ ರಫ್ತು, ಆಮದಿಗಿಂತ ಕಡಿಮೆಯಾದಾಗ
ಡಿ) ಸೇವೆಗಳ ರಫ್ತು, ಆಮದಿಗಿಂತ ಹೆಚ್ಚಾದಾಗ

25) ಭಿಲಾಯ್, ದುರ್ಗಾಪುರ & ರೂರ್ಕೆಲಾ ಉಕ್ಕಿನ ಸ್ಥಾವರಗಳನ್ನು ಯಾವ ಪಂಚವಾರ್ಷಿಕ ಯೋಜನೆಯಲ್ಲಿ ಆರಂಭಿಸಲಾಯಿತು?
ಎ) 1ನೇ ಪಂ. ಯೋ. ಬಿ) 2ನೇ ಪಂ. ಯೋ.
ಸಿ) 3ನೇ ಪಂ. ಯೋ. ಡಿ) 4ನೇ ಪಂ. ಯೋ.

26) ರಾಣಾ ಪ್ರತಾಪ್ ಸಾಗರ ಅಣೆಕಟ್ಟನ್ನು ಯಾವ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ?
ಎ) ಗಂಗಾ ಬಿ) ಝೀಲಂ
ಸಿ) ಬಿಯಾಸ್ ಡಿ) ಚಂಬಲ್

27) ದ್ರವದ ಹನಿಯೊಂದು ಸಂಕುಚಿತಗೊಂಡು ಕನಿಷ್ಠ ಪ್ರದೇಶವನ್ನು ಆವರಿಸಿಕೊಳ್ಳುವ ಪ್ರವೃತ್ತಿಯ ಮುಖ್ಯ ಕಾರಣ ಯಾವುದೆಂದರೆ?
ಎ) ಮೇಲ್ಮೈ ಒತ್ತಡ ಬಿ) ಸ್ನಿಗ್ಧತೆ
ಸಿ) ಸಾಂದ್ರತೆ ಡಿ) ಯಾವುದು ಅಲ್ಲ

28) ಐಸೋಟೋಪು(ಸಮಸ್ಥಾನಿ) ಗಳು ಯಾವುದರಲ್ಲಿ ವ್ಯತ್ಯಾಸ ಹೊಂದುತ್ತವೆ?
ಎ) ಪ್ರೋಟಾನ್ ಬಿ) ನ್ಯೂಟ್ರಾನ್
ಸಿ) ಎಲೆಕ್ಟ್ರಾನ್ ಡಿ) ಪಾಸಿಟ್ರಾನ್

29) ಕಬ್ಬಿಣ ತುಕ್ಕು ಹಿಡಿದಾಗ ಅದರ ತೂಕ.............?
ಎ) ಕಡಿಮೆಯಾಗುತ್ತದೆ ಬಿ) ಹೆಚ್ಚಾಗುತ್ತದೆ
ಸಿ) ಬದಲಾವಣೆಯಿಲ್ಲ ಡಿ) ಯಾವುದು ಅಲ್ಲ

30) ಈ ಮುಂದಿನ ಯಾವ ಧಾತುಗಳ ಲವಣಗಳು ಪಟಾಕಿಗಳಲ್ಲಿ ಬಣ್ಣವನ್ನು ಒದಗಿಸುತ್ತವೆ?
ಎ) ಸ್ಟ್ರಾನ್ಷಿಯಂ & ಬೇರಿಯಂ
ಬಿ) ಸತು & ಗಂಧಕ
ಸಿ) ಪೊಟ್ಯಾಷಿಯಂ & ಪಾದರಸ
ಡಿ) ಕ್ರೋಮಿಯಂ

31) 'ಅರುಮೋಳಿ ವರ್ಮನ್' ಎಂಬುದು ಯಾವ ಚೋಳ ದೊರೆಯ ಮೂಲ ಹೆಸರಾಗಿದೆ?
ಎ) ಕುಲೋತ್ತುಂಗ ಚೋಳ
ಬಿ) ಒಂದನೇ ಪರಾಂತಕ
ಸಿ) ಒಂದನೇ ರಾಜರಾಜ ಡಿ) ಒಂದನೇ ರಾಜೇಂದ್ರ

32) ಈಸ್ಟ್ ಇಂಡಿಯಾ ಕಂಪೆನಿಯು ಸೂರತ್‌ನಲ್ಲಿ ತನ್ನ ಮೊಟ್ಟಮೊದಲ ಫ್ಯಾಕ್ಟರಿಯನ್ನು ನೆಲೆಗೊಳಿಸಿದ್ದು?
ಎ) 1608 ಬಿ) 1600
ಸಿ) 1635 ಡಿ) 1742

33) ನವಾಬರಿಗೂ ಈಸ್ಟ್ ಇಂಡಿಯಾ ಕಂಪೆನಿಗೂ ಸದಾ ಘರ್ಷಣೆಗೆ ಕಾರಣವಾಗಿದ್ದ "ದಸ್ತಕ್" ಎಂದರೆ........?
ಎ) ಕಂಪೆನಿಗೆ ನವಾಬರಿಂದ ಆಕ್ಷೇಪ ಇಲ್ಲದೆ ವ್ಯಾಪಾರ ನಡೆಸಲು ಸಿಕ್ಕ ಪರವಾನಿಗೆ
ಬಿ) ಕಂಪೆನಿಯು ಫಾರುಕ್‌ಸಿಯಾರ್‌ನಿಂದ ಸುಂಕವಿಲ್ಲದೆ ಆಮದು - ರಫ್ತು ಮಾಡಲು ಸಿಕ್ಕ ಪರವಾನಿಗೆ
ಸಿ) ಕಂಪೆನಿಯು ನವಾಬರಿಂದ ಒಳನಾಡಿನಲ್ಲಿ ಫ್ಯಾಕ್ಟರಿಗಳನ್ನು ಸ್ಥಾಪಿಸಲು ಸಿಕ್ಕ ಪರವಾನಿಗೆ
ಡಿ) ಮೇಲಿನ ಯಾವುದು ಅಲ್ಲ

34) "ರಕ್ಷಣೆಗಾಗಿ ಕೇಳಿದ ಮುಸ್ಲಿಮರು ಮೂರ್ಖರು, ಅದನ್ನು ನಿರಾಕರಿಸಿದ ಹಿಂದೂಗಳು ಪರಮ ಮೂರ್ಖರು" ಎಂದು ಹೇಳಿದವರಾರು?
ಎ) ಜವಾಹರಲಾಲ್ ನೆಹರೂ
ಬಿ) ಅಬ್ದುಲ್ ಕಲಾಂ ಆಜಾದ್
ಸಿ) ಮಹಮ್ಮದ್ ಅಲಿ ಡಿ) ಸುಭಾಷ್ ಚಂದ್ರ ಬೋಸ್



Scanned with CamScanner

35) ಭಾರತೀಯ ಮುಸ್ಲಿಂ ಲೀಗ್ ಹೊರಡಿಸುತ್ತಿದ್ದ ಪತ್ರಿಕೆಯ ಹೆಸರು ಯಾವುದು?
ಎ) ಖ್ವಾಮ್ ಬಿ) ಇಂಕಿಲಾಬ್
ಸಿ) ಬಾಂಬೆ ಕ್ರಾನಿಕಲ್ ಡಿ) ಸ್ಟಾರ್ ಆಫ್ ಇಂಡಿಯಾ

36) 1924ರಲ್ಲಿ ನಡೆದ ವೈಕಂ ಸತ್ಯಾಗ್ರಹದ ಉದ್ದೇಶ?
ಎ) ಕೆಳಜಾತಿಗಳಿಗೆ ದೇವಾಲಯ ಪ್ರವೇಶ
ಬಿ) ಭೂಮಾಲೀಕರ ಶೋಷಣೆ ವಿರುದ್ಧದ ಹೋರಾಟ
ಸಿ) ಪತ್ರಿಕೋದ್ಯಮದ ಮೇಲಿನ ನಿಷೇಧ ತೆಗೆದು ಹಾಕಲು
ಡಿ) ಟ್ರಾವನ್‌ಕೋರ್ ರಾಜ್ಯದ ಆಡಳಿತದಲ್ಲಿ ಪ್ರಜಾಪ್ರಭುತ್ವ ತರುವುದು

37) 'ವಿಪ್' ಸ್ಥಾನದ ಕುರಿತಾದ ಕೆಳಗಿನ ಹೇಳಿಕೆ ಗಮನಿಸಿ.
1. ಇದೊಂದು ಸಂವಿಧಾನಾತ್ಮಕ ಸ್ಥಾನವಾಗಿದೆ.
2. ಇದೊಂದು ಶಾಸನಾತ್ಮಕ ಸ್ಥಾನವಾಗಿದೆ.
3. ಪಕ್ಷದ ಸದಸ್ಯರು ಇವರ ನಿರ್ದೇಶನಕ್ಕೆ ಬದ್ಧರಾಗಿರತಕ್ಕದ್ದು.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆ ಗುರ್ತಿಸಿ.
ಎ) 1 & 2 ಬಿ) 2 & 3
ಸಿ) 3 ಮಾತ್ರ ಡಿ) 1 & 3 ಮಾತ್ರ

38) ಸ್ಪೀಕರ್ ಸ್ಥಾನದ ಕುರಿತು ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. 1919ರ ಕಾಯ್ದೆಯಡಿ ಮೊದಲ ಬಾರಿಗೆ ಅಧಿಕೃತವಾಗಿ ಸ್ಪೀಕರ್ ಸ್ಥಾನವು ಸೃಷ್ಟಿಸಲ್ಪಟ್ಟಿತು.
2. ಭಾರತದ ಮೊದಲ ಸ್ಪೀಕರ್– ಜಿ.ವಿ. ಮಾವಳಂಕರ್
3. ಸಂವಿಧಾನದಲ್ಲಿ ಸಭಾಧ್ಯಕ್ಷರು ಆಡಳಿತ ಪಕ್ಷದಿಂದ ಉಪಸಭಾಧ್ಯಕ್ಷರು ವಿರೋಧ ಪಕ್ಷದಿಂದ ಆರಿಸಲ್ಪಡಬೇಕೆಂದು ಉಲ್ಲೇಖಿಸಲಾಗಿದೆ.

ಮೇಲಿನವುಗಳಲ್ಲಿ ತಪ್ಪಾಗಿರುವುದನ್ನು ಗುರ್ತಿಸಿ.
ಎ) 1 & 2 ಬಿ) 2 & 3
ಸಿ) 1 & 3 ಡಿ) 3 ಮಾತ್ರ

39) ಕೆಳಗಿನ ಯಾರನ್ನು ಕೇಂದ್ರದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ 'ಸಾರ್ವಜನಿಕ ಹಣದ ಪಾಲಿಕ' ರೆಂದು ಕರೆಯಲಾಗುತ್ತದೆ?
ಎ) ಭಾರತದ ಲೆಕ್ಕ ನಿಯಂತ್ರಕರು & ಮಹಾಲೇಖಪಾಲರು
ಬಿ) ರಾಷ್ಟ್ರಪತಿ
ಸಿ) ನೀತಿ ಆಯೋಗ ಡಿ)ಲೋಕಸಭೆ

40) ಎಷ್ಟನೇಯ ತಿದ್ದುಪಡಿ ಮುಖಾಂತರ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಅಳವಡಿಸಲಾಯಿತು?
ಎ) 86ನೇ ತಿದ್ದುಪಡಿ ಬಿ) 42ನೇ ತಿದ್ದುಪಡಿ
ಸಿ) 82ನೇ ತಿದ್ದುಪಡಿ ಡಿ) 78ನೇ ತಿದ್ದುಪಡಿ

41) ನರ್ಮದಾ ನದಿಯ ಉಗಮ ಸ್ಥಾನ?
ಎ) ಸತ್ಪುರಾ ಬಿ) ಅಮರಕಂಟಕ
ಸಿ) ಬ್ರಹ್ಮಗಿರಿ ಡಿ) ಪಶ್ಚಿಮ ಘಟ್ಟಗಳು

42) ಭಾರತದ ಕೆಳಗಿನ ಯಾವ ನಗರದ ಮೇಲೆ ಲಂಬವಾಗಿ ಸೂರ್ಯನ ಕಿರಣ ಬೀಳುವುದಿಲ್ಲ?
ಎ) ಪಣಜಿ ಬಿ) ಪೂನಾ
ಸಿ) ಬೆಂಗಳೂರು ಡಿ) ಚಂಡೀಗಢ

43) ಹೊಂದಿಸಿ ಬರೆಯಿರಿ.

| ನದಿ | ಉಗಮ ಸ್ಥಳ |
|---|---|
| P. ನರ್ಮದಾ | 1. ಅಸಾನಸಾಗರ |
| Q. ತಪತಿ | 2. ಅಂಬುತೀರ್ಥ |
| R. ಶರಾವತಿ | 3. ಅಮರಕಂಟಕ |
| S. ಲೂನಿ | 4. ಮುಲ್ತಾಯಿ |

ಆಯ್ಕೆಗಳು:

| | P | Q | R | S |
|---|---|---|---|---|
| ಎ) | 4 | 3 | 2 | 1 |
| ಬಿ) | 1 | 2 | 3 | 4 |
| ಸಿ) | 3 | 4 | 2 | 1 |
| ಡಿ) | 2 | 1 | 3 | 4 |

ಫೋ: 7022471511, 7022473611
ಧಾರವಾಡ-580001

44) ಭಾರತದ ಒಟ್ಟು ವಿಸ್ತೀರ್ಣದಲ್ಲಿ ಕರ್ನಾಟಕ ರಾಜ್ಯ ಹೊಂದಿರುವ ಪ್ರಮಾಣ ಎಷ್ಟು?
ಎ) 4.84 % ಬಿ) 5.84 %
ಸಿ) 6.84 % ಡಿ) 7.84 %

45) ಭಾರತ ಉಪಖಂಡವು ಮೂಲತಃ ಕೆಳಗಿನ ಯಾವುದರ ಭೂಭಾಗವಾಗಿದೆ?
ಎ) ಗೊಂಡ್ವಾನಾ ಭೂಖಂಡ
ಬಿ) ಜುರಾಸಿಕ್ ಭೂಖಂಡ
ಸಿ) ಇಂಡಿಯಾನಾ ಭೂಖಂಡ
ಡಿ) ಯಾವುದು ಅಲ್ಲ

46) ಇವುಗಳಲ್ಲಿ ಖಾರೀಫ್ ಬೆಳೆ ಯಾವುದು?
ಎ) ಗೋಧಿ ಬಿ) ಬಾರ್ಲಿ
ಸಿ) ಎಣ್ಣೆಕಾಳು ಡಿ) ಭತ್ತ

47) ಒಡಿಶಾದ ಕಾಳಾಹಂಡಿ & ಕೋರಾಪಟ್ ಪ್ರದೇಶದಲ್ಲಿ ಅಧಿಕವಾಗಿ ದೊರೆಯುವ ಅದಿರು ಯಾವುದು?
ಎ) ರಾಕ್‌ಸಾಲ್ಟ್ ಬಿ) ಬಾಕ್ಸೈಟ್
ಸಿ) ಡೊಲಾಮೈಟ್ ಡಿ) ಮ್ಯಾಂಗನೀಸ್

48) ಕರ್ನಾಟಕದ ಮೊಟ್ಟಮೊದಲ ರಾಸಾಯನಿಕ ಕಾರ್ಖಾನೆ ಆರಂಭವಾದ ಸ್ಥಳ ಯಾವುದು?
ಎ) ಮಂಗಳೂರು ಬಿ) ಭದ್ರಾವತಿ
ಸಿ) ಚಿತ್ರದುರ್ಗ ಡಿ) ಬೆಳಗೋಳ

49) ಕೆಳಗಿನ ಯಾರ ಒಟ್ಟಾರೆ ನಾಯಕತ್ವದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ನಡೆಯಿತು?
ಎ) ಮಹಾತ್ಮ ಗಾಂಧಿ ಬಿ) ಜವಾಹರ್ ಲಾಲ್ ನೆಹರೂ
ಸಿ) ಸುಭಾಷ್ ಚಂದ್ರ ಬೋಸ್
ಡಿ) ಮೇಲಿನ ಯಾರೂ ಅಲ್ಲ



Scanned with CamScanner

www.shikarat.com



50) ಈ ಕೆಳಗಿನ ಯಾವ ಅಸ್ತ್ರವನ್ನು ರಾಷ್ಟ್ರೀಯ ಚಳುವಳಿಗಾರರು ಬಳಸಿ ಬಂಗಾಳವನ್ನು ಮತ್ತೆ ಒಂದುಗೂಡಿಸಲು ಬ್ರಿಟೀಷ್ ಸರ್ಕಾರದ ಮೇಲೆ ಒತ್ತಡ ತಂದರು?
ಎ) ಸತ್ಯಾಗ್ರಹ ಬಿ) ಅಸಹಕಾರ ಚಳುವಳಿ
ಸಿ) ಸ್ವದೇಶಿ ಚಳುವಳಿ ಡಿ) ತೆರಿಗೆಗಳ ನಿರಾಕರಣೆ

51) 'ಸಿದ್ಧಾಂತ ಶಿರೋಮಣಿ' ಯು ಕೆಳಗಿನ ಯಾರ ಕೃತಿಯಾಗಿದೆ?
ಎ) ಮಹೇಶ್ವರ ಬಿ) ಭಾಸ್ಕರಾಚಾರ್ಯ
ಸಿ) ಹರಿಸೇನ ಡಿ) ಆರ್ಯಭಟ

52) ಯಾವ ಯುದ್ಧದ ವಿಜಯದ ನಂತರ ಶಿವಾಜಿ ರಾಯಗಢದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು 'ಮಹಾರಾಜಾ ಛತ್ರಪತಿ' ಎಂಬ ಬಿರುದನ್ನು ಪಡೆದುಕೊಂಡರು?
ಎ) ಸೂರತ್ ಕದನ ಬಿ) ಸಂಗಮನೇರ ಕದನ
ಸಿ) ಸಲ್ಹೇರ್ ಕದನ ಡಿ) ಸಮುಗಢ ಕದನ

53) 'ಭಾರತ & ಅರೇಬಿಯಾದ ಇಡೀ ದೇಶೀಯ ಸಾಹಿತ್ಯವು ಒಳ್ಳೆಯ ಐರೋಪ್ಯ ಗ್ರಂಥಾಲಯದ ಒಂದು ಪುಸ್ತಕ ಕಪಾಟಿಗೂ ಸಾಟಿಯಿಲ್ಲ' ಎಂದು ಹೇಳಿದವರಾರು?
ಎ) ಚಾರ್ಲ್ಸ್ ಗ್ರಾಂಟ್ ಬಿ) ಚಾರ್ಲ್ಸ್ ವುಡ್
ಸಿ) ವಿನ್‌ಸ್ಟನ್ ಚರ್ಚಿಲ್ ಡಿ) ಮೆಕಾಲೆ

54) ಘಾಟಗಾಂವ್ (Ghatigaon) ವನ್ಯಜೀವಿ ಧಾಮ ಇರುವುದು?
ಎ) ಜಾರ್ಖಂಡ್ ಬಿ) ಬಿಹಾರ್
ಸಿ) ಮಧ್ಯಪ್ರದೇಶ ಡಿ) ಮಹಾರಾಷ್ಟ್ರ

55) ಡೋಲ್ ರೈಟ್ ಯಾವ ರೀತಿಯ ಶಿಲೆಗೆ ಉದಾಹರಣೆಯಾಗಿದೆ?
ಎ) ಅಗ್ನಿಶಿಲೆ ಬಿ) ಜಲಜಶಿಲೆ
ಸಿ) ರೂಪಾಂತರ ಶಿಲೆ ಡಿ) ಕ್ಯಾಲ್ಕವ್ಯಾಟರಸ್ ಶಿಲೆ

56) ಕೆಳಗಿನವುಗಳಲ್ಲಿ ತಪ್ಪಾದ ಜೋಡಣೆ ಗುರ್ತಿಸಿ.
ಎ) ಭಾರತ – ಜೂಮಿಂಗ್
ಬಿ) ಬ್ರೆಜಿಲ್ – ರೋಕಾ ಸಿ) ಇಂಡೋನೇಷ್ಯಾ – ಲಡಾಂಗ್
ಡಿ) ಮಧ್ಯ ಅಮೇರಿಕಾ – ತಮರ‍್ಯೆ

57) ಭಾರತದ ಸಂವಿಧಾನದಲ್ಲಿನ 'ವನ್ಯಜೀವಿಗಳ ರಕ್ಷಣೆ' ಈ ಕೆಳಗಿನವುಗಳಲ್ಲಿ ಯಾವುದರ ಅಡಿಯಲ್ಲಿ ಕಂಡುಬರುತ್ತವೆ?
1. ಮೂಲಭೂತ ಕರ್ತವ್ಯಗಳು
2. ರಾಜ್ಯ ನೀತಿ ನಿರ್ದೇಶಕ ತತ್ವಗಳು
3. ಏಳನೇ ಅನುಸೂಚಿ
4. ಮೂಲಭೂತ ಹಕ್ಕುಗಳು

ಆಯ್ಕೆಗಳು:
ಎ) 1 & 2 ಬಿ) 2 & 3
ಸಿ) 1, 2 & 3 ಡಿ) 2, 3 & 4

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಪಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಬಾವಿ, ಧಾರವಾಡ-580001
ಮೊ: 7022471511, 7022473611

58) 'ಇರಿಯಾನ್ ಜಾಯಾ' ಈ ಕೆಳಗಿನ ಯಾವ ದೇಶದ ಭಾಗವಾಗಿದೆ?
ಎ) ಫಿಲಿಪೈನ್ಸ್ ಬಿ) ಇಂಡೋನೇಷ್ಯಾ
ಸಿ) ಜಪಾನ್ ಡಿ) ಚೀನಾ

59) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಇದು ಹುಲಿಯೋಜನೆಯಲ್ಲಿ ಸೇರಿಸಲ್ಪಟ್ಟ ಮೊದಲ ರಾಷ್ಟ್ರೀಯ ಉದ್ಯಾನವಾಗಿದೆ.
2. ಇದು ಅತಿ ಹೆಚ್ಚು ಹುಲಿ ಸಂಖ್ಯೆ ಹೊಂದಿರುವ ಹೆಗ್ಗಳಿಕೆಯನ್ನು ಹೊಂದಿದೆ.
3. ಭಾರತದ ಮೊದಲ ರಾಷ್ಟ್ರೀಯ ಉದ್ಯಾನವಾಗಿದೆ.

ಮೇಲಿನ ಹೇಳಿಕೆಗಳು ಯಾವ ರಾಷ್ಟ್ರೀಯ ಉದ್ಯಾನದ ಕುರಿತಾಗಿವೆ?
ಎ) ಬನ್ನೇರುಘಟ್ಟ ರಾ.ಉ
ಬಿ) ಮಾನಸ್ ರಾ.ಉ ಸಿ) ಜಿಮ್‌ಕಾರ್ಬೆಟ್ ರಾ.ಉ
ಡಿ) ಸರಿಸ್ಕಾ ರಾ.ಉ

60) ತುಂಗಭದ್ರಾ ನದಿಯ ಪ್ರಾಚೀನ ಹೆಸರೇನು?
ಎ) ಸಿಂಧೂ ಬಿ) ಪಂಪಾ
ಸಿ) ಕುಭಾ ಡಿ) ವಿತಸ್ತಾ

61) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಮತದಾನದ ಹಕ್ಕು ಪಡೆದವರೆಲ್ಲ ಲೋಕಸಭೆ ಚುನಾವಣೆಗೆ ನಿಲ್ಲಬಹುದು.
2. ವಿಧಾನಸಭೆ ಹಾಗೂ ವಿಧಾನ ಪರಿಷತ್ ಸದಸ್ಯತ್ವಗಳೆರಡಕ್ಕೂ ಒಂದೇ ವಯೋಮಿತಿ ಇದೆ.
3. ಜಿಲ್ಲಾ ಪಂಚಾಯ್ತಿ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯತ್ವಗಳೆರಡಕ್ಕೂ ಒಂದೇ ವಯೋಮಿತಿ ಇದೆ.
4. ರಾಜ್ಯ ಸಭಾ ಸದಸ್ಯರು ಹಾಗೂ ಪ್ರಧಾನ ಮಂತ್ರಿಗಳ ಕನಿಷ್ಠ ವಯೋಮಿತಿ 30 ವರ್ಷವಾಗಿದೆ.
ಮೇಲಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಗುರ್ತಿಸಿ.
ಎ) 1, 2 & 4 ಬಿ) 2, 3 & 4
ಸಿ) 4 ಮಾತ್ರ ಡಿ) ಮೇಲಿನ ಯಾವುದು ಅಲ್ಲ

62) ರಾಷ್ಟ್ರಪತಿಗಳನ್ನು ಸಂಭೋದಿಸುವ 'His Excellency' ಎಂದು ಕರೆಯುವ ಸಂಪ್ರದಾಯಕ್ಕೆ ಯಾರ ಅಧಿಕಾರಾವಧಿಯಲ್ಲಿ ತೆರೆ ಎಳೆಯಲಾಯಿತು?
ಎ) ಪ್ರಣಬ್ ಮುಖರ್ಜಿ ಬಿ) ಡಾ// ಸರ್ವಪಲ್ಲಿ ರಾಧಾಕೃಷ್ಣನ್
ಸಿ) ಡಾ// ಎ.ಪಿ.ಜೆ. ಅಬ್ದುಲ್ ಕಲಾಂ
ಡಿ) ಕೆ.ಆರ್. ನಾರಾಯಣ್

63) ಕೆಳಗಿನವರಲ್ಲಿ ಯಾರು ಮೊದಲ ಹಂಗಾಮಿ ರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸಿದ್ದಾರೆ?
ಎ) ವಿ.ವಿ. ಗಿರಿ ಬಿ) ಬಿ.ಡಿ. ಜತ್ತಿ
ಸಿ) ಮಹಮ್ಮದ್ ಹಿದಾಯತ್‌ವುಲ್ಲಾ
ಡಿ) ನೀಲಂ ಸಂಜೀವ ರೆಡ್ಡಿ



Scanned with CamScanner

www.shikarat.com

SHIKARAT.COM
Online Education

## For more contact us

**Instagram**
https://www.instagram.com/shikarat_com/

**Telegram**
https://telegram.me/shikarat

**Facebook**
https://www.facebook.com/shikarat/

**Twitter**
https://twitter.com/Shikarat_com

**Pinterest**
https://in.pinterest.com/shikarat_com/

**Website**
www.shikarat.com

**Email**
Admin@shikarat.com

SHIKARAT.COM
Online Education

**Sharing is Caring**

**If it is helpful Please Share with your friends**

9742928829

www.shikarat.com



64) ತಪ್ಪಾದ ಜೋಡಣೆ ಗುರ್ತಿಸಿ.
ಎ) ಎತ್ನಾಲಜಿ – ಜನಾಂಗಗಳ ಅಧ್ಯಯನ
ಬಿ) ಸೆಲೆನೋಗ್ರಾಫಿ – ಚಂದ್ರನ ಅಧ್ಯಯನ
ಸಿ) ಗ್ಲೈಸಿಕೊಲಾಜಿ – ಜ್ಞಾನೇಂದ್ರಿ ಸಂಬಂಧಿತ ರೋಗಗಳ ಅಧ್ಯಯನ
ಡಿ) ಕಾರ್ಪೋಲಾಜಿ – ವಿಶ್ವದ ಉಗಮ & ವಿಕಾಸದ ಅಧ್ಯಯನ

65) ಆ್ಯಂಟಿ ಹಿಸ್ಟಾಮಿನ್ಸ್ ಕೆಳಗಿನ ಯಾವುದಕ್ಕೆ ಸಂಬಂಧಿಸಿವೆ?
ಎ) ನಿದ್ರಾ ಔಷಧಿಗಳು ಬಿ) ರೋಗಾಣುಗಳ ಬೆಳವಣಿಗೆ ತಡೆ
ಸಿ) ಅಲರ್ಜಿ ಮುಕ್ತ ಔಷಧ
ಡಿ) ಉದ್ವೇಗ ಶಮನಕಾರಿ ಔಷಧಿಗಳು

66) ಮರುಭೂಮಿಯಲ್ಲಿ ಮರೀಚಿಕೆಗಳು ಉಂಟಾಗಲು ಕಾರಣವೇನು?
ಎ) ಬೆಳಕಿನ ವ್ಯತೀಕರಣ
ಬಿ) ಬೆಳಕಿನ ಚದುರುವಿಕೆ
ಸಿ) ಬೆಳಕಿನ ದುಪ್ಪಟ್ಟು ವಕ್ರೀಭವನ
ಡಿ) ಬೆಳಕಿನ ಸಂಪೂರ್ಣ ಆಂತರಿಕ ಪ್ರತಿಫಲನ

67) ರೇಲ್ವೆ ಪ್ಲಾಟ್‌ಫಾರ್ಮಿನಲ್ಲಿ ನಿಂತಿರುವ ಒಬ್ಬ ವ್ಯಕ್ತಿಗೆ ವೇಗದಿಂದ ಸಮೀಪಿಸುತ್ತಿರುವ ಎಂಜಿನನ್ನು ಸ್ಥಾಯಿಯು ಏರಿದಂತೆ ಭಾಸವಾಗಲು ಕಾರಣವೇನು?
ಎ) ಧ್ವನಿ (Acoustic) ಪರಿಣಾಮ
ಬಿ) ಕಾಂಪ್ಟನ್ ಪರಿಣಾಮ
ಸಿ) ಡಾಪ್ಲರ್ ಪರಿಣಾಮ ಡಿ) ಯಾವುದು ಅಲ್ಲ

68) ಕಣ್ಣಿನ ಸಮೀಪ ದೃಷ್ಟಿ ತೊಂದರೆಯನ್ನು ಕೆಳಗಿನ ಯಾವುದರ ಬಳಕೆಯ ಮೂಲಕ ಸರಿ ಪಡಿಸಬಹುದು?
ಎ) ಪೀನ ಮಸೂರ ಬಿ) ನಿಮ್ನ ಮಸೂರ
ಸಿ) ಸಮತಲ ಗಾಜು ಡಿ) ಉರುಳೆಯಾಕಾರದ ಮಸೂರ

69) ಫ್ರೆಂಚ್ ಪ್ರವಾಸಿಗ ಫ್ರಾಂಕೋಯಿಸ್ ಬರ್ನಿಯರ್‌ನು ಕೆಳಗಿನ ಯಾರಿಗೆ ವೈದ್ಯನಾಗಿದ್ದನು?
ಎ) ಅಕ್ಬರ್ ಬಿ) ಹುಮಾಯೂನ್
ಸಿ) ಜಹಾಂಗೀರ್ ಡಿ) ಷಹಜಹಾನ್

70) ಕೆಳಗಿನ ಯಾವ ಕಟ್ಟಡವು ಅಕ್ಬರ್‌ನಿಂದ ನಿರ್ಮಿತವಾಗಿದ್ದು ಪೂರ್ಣ ಹಿಂದೂಶೈಲಿ & ಕಲಾಕಾರಿಕೆಯನ್ನೊಳಗೊಂಡಿದೆ?
ಎ) ದೆಹಲಿಯ ಹುಮಾಯೂನ್‌ನ ಸಮಾಧಿ
ಬಿ) ಆಗ್ರಾ ಕೋಟೆಯ ಜಹಾಂಗೀರಿ ಮಹಲ್
ಸಿ) ಫತೇಪುರ ಸಿಕ್ರಿಯ ಬುಲಂದ ದರ್ವಾಜಾ
ಡಿ) ಸಲೀಂ ಚಿಸ್ತಿಯ ಸಮಾಧಿ

71) ರಾಜಕುಮಾರ ದಾರಾ ಶಿಕೋ ಕೆಳಗಿನ ಯಾವ ಸೂಫಿ ಶಾಖೆಯ ಅನುಯಾಯಿ ಆಗಿದ್ದನು?
ಎ) ನಕ್ಷ ಬಂಧಿ ಬಿ) ಖದ್ರಿ
ಸಿ) ಶತ್ತರಿ ಡಿ) ಸುಹರ್ ವರ್ದಿ

72) ಕುದುರೆಗಳಿಗೆ ಮುದ್ರೆ ಹಾಕುವ 'ದಾಗ್' ಪದ್ಧತಿಯನ್ನು ಜಾರಿಗೆ ತಂದವರಾರು?
ಎ) ಬಲ್ಬನ್ ಬಿ) ಇಲ್ತುಮಷ್
ಸಿ) ಕುತ್ಬುದ್ದೀನ್ ಐಬಕ್
ಡಿ) ಅಲ್ಲಾವುದ್ದೀನ್ ಖಿಲ್ಜಿ

73) ಟರ್ಕರು ಭಾರತದಲ್ಲಿ ಕೆಳಗಿನ ಯಾವ ತಂತ್ರಜ್ಞಾನವನ್ನು ಹತ್ತಿ ಬಟ್ಟೆ ಕೈಗಾರಿಕೆಯಲ್ಲಿ ಜಾರಿಗೆ ತರಲಿಲ್ಲ?
ಎ) ನೇಯ್ಗೆಗಾರರ ಕಾಲೊತ್ತುವ ಯಂತ್ರ
ಬಿ) ನೂಲುವ ಚಕ್ರ ಸಿ) ಹತ್ತಿಯ ಹಲ್ಲು ಬಾಚಾಣಿಕೆ
ಡಿ) ನೀರಿನ ಚೌಕಟ್ಟು

74) ದೆಹಲಿ ಸುಲ್ತಾನರ ಸಮಯದಲ್ಲಿ ಪಾಯಕರು ಅಥವಾ ಪೈಕ್‌ಗಳು ಎಂದರೆ ಯಾರು?
ಎ) ವಿರಾಗಿಗಳು ಬಿ) ಗೂಢಾಚಾರರು
ಸಿ) ಪದಾತಿ ಸೈನಿಕರು ಡಿ) ಅಶ್ವದಳ ಸೈನಿಕರು

75) ದಾಬೋಲಿಮ್ ವಿಮಾನ ನಿಲ್ದಾಣ ಯಾವ ರಾಜ್ಯದಲ್ಲಿದೆ?
ಎ) ಆಂಧ್ರ ಪ್ರದೇಶ ಬಿ) ಕೇರಳ
ಸಿ) ಪಂಜಾಬ್ ಡಿ) ಗೋವಾ

76) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಸಂವಿಧಾನವನ್ನು ತಿದ್ದುಪಡಿ ಮಾಡುವ ಸೀಮಿತ ಅಧಿಕಾರವು ಸಂವಿಧಾನದ ಮೂಲ ರಚನೆಯ ಅಂಶಗಳಲ್ಲೊಂದಾಗಿದೆ.
2. ಮೂಲಭೂತ ಹಕ್ಕು & ರಾಜ್ಯ ನಿರ್ದೇಶಕ ತತ್ವಗಳ ನಡುವೆ ಸಾಮರಸ್ಯ ಸಾಧಿಸುವುದು ಕೂಡಾ ಮೂಲ ರಚನೆಯ ಅಂಶವಾಗಿದೆ.
ಸರಿಯಾದ ಹೇಳಿಕೆ ಗುರ್ತಿಸಿ.
ಎ) 1 ಮಾತ್ರ ಬಿ) 2 ಮಾತ್ರ
ಸಿ) 1 & 2 ಡಿ) ಯಾವುದು ಅಲ್ಲ

77) ಸಂವಿಧಾನ ತಿದ್ದುಪಡಿ (368 ವಿಧಿಯಡಿಯಲ್ಲಿ) ಕುರಿತ ಹೇಳಿಕೆ ಗಮನಿಸಿ.
1. ಈ ಮಸೂದೆ ಖಾಸಗಿ ಸದಸ್ಯ ಹಾಗೂ ಮಂತ್ರಿಗಳಿಬ್ಬರಿಂದಲೂ ಪರಿಚಯಿಸಲ್ಪಡಬಹುದು.
2. ರಾಷ್ಟ್ರಪತಿಗಳು ಈ ತಿದ್ದುಪಡಿ ಮಸೂದೆ ಮೇಲೆ ಪಾಕೆಟ್ ವೀಟೋ ಅಧಿಕಾರವನ್ನು ಹೊಂದಿದ್ದಾರೆ.
3. ಪ್ರತಿ ಮಸೂದೆಯೂ ಅರ್ಧಕ್ಕಿಂತಲೂ ಹೆಚ್ಚು ರಾಜ್ಯಗಳ ವಿಧಾನಸಭೆಗಳಿಂದ ಒಪ್ಪಿತವಾಗಬೇಕು.

ಮೇಲಿನವುಗಳಲ್ಲಿ ತಪ್ಪಾದ ಹೇಳಿಕೆ ಗುರ್ತಿಸಿ.
ಎ) 1 & 2 ಬಿ) 2 & 3
ಸಿ) 3 ಮಾತ್ರ ಡಿ) ಮೇಲಿನ ಎಲ್ಲವೂ

78) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಸಂವಿಧಾನದ ಮೂಲ ಸಂರಚನೆಯ ವಿಷಯವು ಆಸ್ತಿಯ ಹಕ್ಕಿನ ವಿವಾದದಿಂದ ಹುಟ್ಟಿಕೊಂಡಿತು.
2. 1951ರ ಮೊದಲ ಸಂವಿಧಾನ ತಿದ್ದುಪಡಿ ಮೂಲಭೂತ ರಚನೆಯ ವಿಕಾಸಕ್ಕೆ ನಾಂದಿ ಹಾಡಿತು.
3. 1951ರ ಮೊದಲ ತಿದ್ದುಪಡಿಯು ಶಂಕರಿ ಪ್ರಸಾದ್ ಪ್ರಕರಣದಲ್ಲಿ ಪ್ರಶ್ನಿಸಲ್ಪಟ್ಟಿತು.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆಗಳು?
ಎ) 1 & 2 ಬಿ) 2 & 3
ಸಿ) 1, 2 & 3 ಡಿ) 1 ಮಾತ್ರ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ ID Square, 1st ಮಹಡಿ, ಸುಭಾಷ್ ರಸ್ತೆ, ಧಾರವಾಡ-580001 ಮೊ: 7022471511, 7022473611



Scanned with CamScanner

www.shikarat.com



79) ಕೆಳಗಿನವುಗಳಲ್ಲಿ ಯಾವ ಸೂಚ್ಯಾಂಕವು ಮಹಿಳೆಯರ ಸಬಲೀಕರಣವನ್ನು ಅಳತೆ ಮಾಡುತ್ತದೆ?
ಎ) GEM  ಬಿ) HDI
ಸಿ) GDI  ಡಿ) PCI

80) ಹೊಂದಿಸಿ ಬರೆಯಿರಿ.

| ಜೈವಿಕ ಸಂರಕ್ಷಣಾವಲಯ | ರಾಜ್ಯ |
|---|---|
| P. ದಿಹಾಂಗ್ – ದಿಬಾಂಗ್ | 1. ಮಧ್ಯಪ್ರದೇಶ |
| Q. ಪನ್ನಾ | 2. ಮಣಿಪುರ |
| R. ನೊಕ್ರೆಕ್ | 3. ಆಂಧ್ರಪ್ರದೇಶ |
| S. ಶೇಷಾಚಲಂ ಬೆಟ್ಟಗಳು | 4. ಅರುಣಾಚಲ ಪ್ರದೇಶ |
| | 5. ಮೇಘಾಲಯ |

ಆಯ್ಕೆಗಳು:

| | P | Q | R | S |
|---|---|---|---|---|
| ಎ) | 4 | 3 | 2 | 1 |
| ಬಿ) | 1 | 2 | 3 | 4 |
| ಸಿ) | 4 | 5 | 2 | 1 |
| ಡಿ) | 4 | 1 | 5 | 3 |

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಪಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಭಾವಿ, ಧಾರವಾಡ-580001
ಮೊ: 7022471511, 7022473611

81) 2022ನೇ ಸಾಲಿನ ಗ್ರ್ಯಾಮಿ ಪ್ರಶಸ್ತಿ ರಿಕಿ ಕೇಜ್ ಅವರ ಯಾವ ಅಲ್ಬಂ ಗೆ ದೊರೆತಿದೆ?
ಎ) Breath life  ಬಿ) One With Earth Song
ಸಿ) Divine Tides  ಡಿ) My Earth Songs

82) ಕರ್ನಾಟಕ ಸರ್ಕಾರ ನೀಡುವ ಕ್ರೀಡಾ ಕ್ಷೇತ್ರದ ಏಕಲವ್ಯ ಪ್ರಶಸ್ತಿಯ ನಗದು ಮೊತ್ತವೆಷ್ಟು?
ಎ) 1 ಲಕ್ಷ  ಬಿ) 1.5 ಲಕ್ಷ
ಸಿ) 5 ಲಕ್ಷ  ಡಿ) 2 ಲಕ್ಷ

83) ಜಗತ್ತಿನ ಅತಿ ದೊಡ್ಡ ಚರ್ಚ್ ಮಿಜೋರಾಂ ರಾಜ್ಯದಲ್ಲಿ ನಿರ್ಮಾಣವಾಗಲಿದ್ದು, ಯಾವ ಬುಡಕಟ್ಟು ಜನಾಂಗದವರು ಸ್ಥಾಪಿಸಲಿದ್ದಾರೆ?
ಎ) ಝೂಪೇಟ್  ಬಿ) ತಂಗೂರ್
ಸಿ) ಲೀಲಾಲ್  ಡಿ) ಮಾರ್

84) 2021ರ ಸರಸ್ವತಿ ಸಮ್ಮಾನ್ ಪುರಸ್ಕೃತ ಕವಿ –
ಎ) ಮನೋಜ್ ಪಾಂಡೆ  ಬಿ) ಮನೋಜ ಸಿನ್ಹಾ
ಸಿ) ಭಾಷ್ಯಂ ಸ್ವಾಮಿ  ಡಿ) ಪ್ರೊ. ರಾಮದರಾಶ ಪಾಶ್ರಾ

85) ಸರ್ಹುಲ್ ಉತ್ಸವ ಇತ್ತೀಚೆಗೆ ಯಾವ ರಾಜ್ಯದಲ್ಲಿ ಆಚರಿಸಲಾಯಿತು?
ಎ) ಮಿಜೋರಾಂ  ಬಿ) ಜಾರ್ಖಂಡ್
ಸಿ) ನಾಗಾಲ್ಯಾಂಡ್  ಡಿ) ಕರ್ನಾಟಕ

86) 'ಕರ್ನಾಟಕ ಹಕ್ಕಿ ಹಬ್ಬ' ವು ಕೊಡಗಿನಲ್ಲಿ ಯಾವ ಪಕ್ಷಿಯನ್ನು ಕೇಂದ್ರೀಕರಿಸಿ ನಡೆಯುತ್ತಿದೆ?
ಎ) ಒಂದು ಕೊಂಬಿನ ಕೊಕ್ಕರೆ
ಬಿ) ಬಿಳಿ ಹಾರ್ನ್‌ಬಿಲ್
ಸಿ) ಕಪ್ಪು ಜುಟ್ಟಿನ ಗಿಡುಗ  ಡಿ) ಗುಬ್ಬಚ್ಚಿ

87) 'SAMBHAV' ಅನ್ನು ಯಾವ ಬ್ಯಾಂಕ್ ಆರಂಭಿಸಿದೆ?
ಎ) ಎಸ್‌ಬಿಐ  ಬಿ) ಆರ್‌ಬಿಐ
ಸಿ) ಯುಬಿಐ  ಡಿ) ಐಸಿಐಸಿಐ

88) ಇಂಧನ & ಹವಾಮಾನ ಸೂಚ್ಯಂಕ – ನೀತಿ ಆಯೋಗ ಪ್ರಕಟಿಸಿದ್ದು ಮೊದಲ ಸ್ಥಾನದಲ್ಲಿರುವ ರಾಜ್ಯ ಯಾವುದು ?
ಎ) ಕರ್ನಾಟಕ  ಬಿ) ಗುಜರಾತ್
ಸಿ) ಕೇರಳ  ಡಿ) ಪಂಜಾಬ್

89) "ಕಾಂಗ್ರಾ ಟೀ" ಇತ್ತೀಚೆಗೆ ಸುದ್ದಿಯಲ್ಲಿದ್ದು ಯಾವ ರಾಜ್ಯಕ್ಕೆ ಸಂಬಂಧಿಸಿದೆ?
ಎ) ಅಸ್ಸಾಂ  ಬಿ) ಕೇರಳ
ಸಿ) ಕರ್ನಾಟಕ  ಡಿ) ಹಿಮಾಚಲ ಪ್ರದೇಶ

90) 2021ರ 56ನೇ ಜ್ಞಾನಪೀಠ ಪ್ರಶಸ್ತಿಗೆ ನೀಲಮಣಿ ಪೂಕರ್ ಪಾತ್ರರಾಗಿದ್ದು, ಇವರು ಯಾವ ಭಾಷಾ ಕವಿಯಾಗಿದ್ದಾರೆ?
ಎ) ತುಳು  ಬಿ) ಇಂಗ್ಲೀಷ್
ಸಿ) ಮಲಯಾಳಿ  ಡಿ) ಅಸ್ಸಾಮಿ

91) ಒಬ್ಬ ವ್ಯಕ್ತಿಯನ್ನು ತೋರಿಸುತ್ತಾ ಮಾಲಿನಿ ಹೀಗೆ ಹೇಳಿದಳು. " ಅವನ ಮಗ ನನ್ನ ಮಗನ ಮಾವ. ಹಾಗಾದರೆ ವ್ಯಕ್ತಿ ಮಾಲಿನಿಗೆ ಹೇಗೆ ಸಂಬಂಧ?
ಎ) ಅಜ್ಜ  ಬಿ) ಸಹೋದರ
ಸಿ) ತಂದೆ  ಡಿ) ಸೋದರಳಿಯ

92) ಒಂದು ವೇಳೆ X ಅನ್ನು A ಎಂದು, + ಅನ್ನು R ಎಂದು, / ಅನ್ನು E ಎಂದು, ಮತ್ತು – ಅನ್ನು B ಎಂದು ಸಂಕೇತಿಸಿದಾಗ 24B6E2A9R17 ನ ಬೆಲೆ ಏನು?
ಎ) 17  ಬಿ) –3
ಸಿ) 14  ಡಿ) –10

93) ಒಬ್ಬ ವ್ಯಕ್ತಿಯು 4 ಕಿ.ಮೀ. /ಗಂ ವೇಗದಲ್ಲಿ 3 ಗಂಟೆಗಳ ಕಾಲ ಚಲಿಸಿದ ನಂತರ ವಾಪಸ್ಸು ಬರುವಾಗ 16 ಕಿ.ಮೀ./ಗಂ ವೇಗದಲ್ಲಿ ಓಡಿಕೊಂಡು ಹಿಂತಿರುಗಿದ್ದಾನೆ. ಹಾಗಾದರೆ ಅವನು ಎಷ್ಟು ಸಮಯದವರೆಗೆ ಓಡಿದ್ದಾನೆ?
ಎ) 45 ನಿಮಿಷ  ಬಿ) 72 ನಿಮಿಷ
ಸಿ) 30 ನಿಮಿಷ  ಡಿ) 42 ನಿಮಿಷ

94) ಅರ್ಜುನ & ರಾಜು ಅವರ ಪ್ರಸ್ತುತ ವಯಸ್ಸಿನ ಅನುಪಾತ 5:2 ಇದೆ. ಅವರ ವಯಸ್ಸಿನ ಮೊತ್ತ 63 ಆಗಿದ್ದರೆ, 9 ವರ್ಷಗಳ ನಂತರ ಅವರ ವಯಸ್ಸಿನ ಅನುಪಾತವೇನು?
ಎ) 5:2  ಬಿ) 2:1
ಸಿ) 3:2  ಡಿ) 4:3



Scanned with CamScanner

www.shikarat.com



95) 2022ರ ಕ್ಯಾಲೆಂಡರ್‌ನಂತೆ ಇರುವ ಮುಂದಿನ ವರ್ಷದ ಕ್ಯಾಲೆಂಡರ್ ಯಾವುದು?
ಎ) 2028
ಬಿ) 2033
ಸಿ) 2050
ಡಿ) 2045

96) ಸಂಜು ಒಂದು ಕೆಲಸವನ್ನು 16 ದಿನಗಳಲ್ಲಿ ಮುಗಿಸಬಲ್ಲ. ಅದೇ ಕೆಲಸವನ್ನು ಅವನ ಸ್ನೇಹಿತ ಪೃಥ್ವಿಯ ಜೊತೆಗೆ ಸೇರಿ 12 ದಿನಗಳಲ್ಲಿ ಮುಗಿಸಬಲ್ಲನು. ಆ ಕೆಲಸವನ್ನು ಪೃಥ್ವಿ ಒಬ್ಬನೇ ಎಷ್ಟು ದಿನಗಳಲ್ಲಿ ಮುಗಿಸಬಲ್ಲನು?
ಎ) 32 ದಿನ
ಬಿ) 36 ದಿನ
ಸಿ) 48 ದಿನ
ಡಿ) 24 ದಿನ

97) ಒಬ್ಬ ವ್ಯಾಪಾರಿಯು ಆಟಿಕೆಯ ಸಾಮಾನನ್ನು 540 ರೂ. ಗೆ ಮಾರಿದಾಗ ಆತನಿಗೆ ಶೇ. 20% ಲಾಭವಾಗುತ್ತದೆ. ಹಾಗಾದರೆ ಆ ಆಟಿಕೆಯ ಬೆಲೆ ಏನು?
ಎ) 350 ರೂ.
ಬಿ) 250 ರೂ.
ಸಿ) 450 ರೂ.
ಡಿ) 400 ರೂ.

98) ತರಗತಿಯ ಪರೀಕ್ಷೆಯಲ್ಲಿ ರ್‍ಯಾಂಕ್‌ಗಳ ಪ್ರಕಾರ, ಅವಿನಾಶನು ಆರಂಭದಿಂದ 12ನೆಯವನಾಗಿದ್ದಾನೆ. ಅಜಯ್ ಕೊನೆಯಿಂದ 22ನೆಯವನಾಗಿದ್ದಾನೆ. ಇವರಿಬ್ಬರ ಸ್ಥಾನಗಳನ್ನು ಅದಲು-ಬದಲು ಮಾಡಿದಾಗ ಅವಿನಾಶನು ಆರಂಭದಿಂದ 31ನೆಯವನಾಗುತ್ತಾನೆ. ಹಾಗಾದರೆ ತರಗತಿಯಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?
ಎ) 53 ಬಿ) 51
ಸಿ) 52 ಡಿ) 50

99) ಈ ಸರಣಿಯಲ್ಲಿನ ಮುಂದಿನ ಸಂಖ್ಯೆ ಯಾವುದು?
0, 2, 9, 28, 65, .......... ?
ಎ) 256 ಬಿ) 125
ಸಿ) 126 ಡಿ) 81

100) ಈ ಕೆಳಗೆ ನೀಡಲಾಗಿರುವ ದಾಳದ ಚಿತ್ರವನ್ನಾಧರಿಸಿ 6 ಹಿಮ್ಮುಖದ ಸಂಖ್ಯೆಯನ್ನು ಗುರುತಿಸಿರಿ :




ಎ) 4 ಬಿ) 5
ಸಿ) 1 ಡಿ) 3

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಪಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಭಾವಿ, ಧಾರವಾಡ-580001
ಮೊ: 7022471511, 7022473611



Scanned with CamScanner